# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 787 |
| ಮಾನ್ಯ ಸದಸ್ಯರ ಹೆಸರು | ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್)<br>(ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 16-12-2024 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಪ್ರಸ್ತುತ 2159 ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ 206 ಗ್ರಾಮೀಣ ಸಮುದಾಯ ಆರೋಗ್ಯ ಕೇಂದ್ರಗಳು 147 ತಾಲ್ಲೂಕು ಆಸ್ಪತ್ರೆಗಳು ಕಾರ್ಯ ನಿರ್ವಹಿಸುತ್ತಿವೆ.<br><br>ಜಿಲ್ಲಾವಾರು, ತಾಲ್ಲೂಕುವಾರು ವಿವರವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ) | ಈ ಎಲ್ಲಾ ಆಸ್ಪತ್ರೆಗಳಲ್ಲಿ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ರಾಜ್ಯದಲ್ಲಿ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ, ಸಾರ್ವಜನಿಕರಿಗೆ ಮೂಲ ಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ 2024-25ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕವಾರು ಆಸ್ಪತ್ರೆಗಳ ನಿರ್ಮಾಣ ಹಾಗೂ ದುರಸ್ಥಿಗೆ ನಿಗಧಿಪಡಿಸಿದ ಅನುದಾನದ ವಿವರಗಳು ಈ ಕೆಳಗಿನಂತಿದೆ. |

| ಕ್ರಸಂ | ಲೆಕ್ಕಶೀರ್ಷಿಕೆ | ಅನುದಾನ ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | 4210-01-110-1-01-133 (ಎಸ್.ಡಿ.ಪಿ) | 11200.00 |
| 2 | 4210-01-110-1-01-386 (ಪ್ರಧಾನ ಕಾಮಗಾರಿಗಳು) | 39157.57 |
| 3 | 4210-01-110-1-01-422 (ಎಸ್.ಸಿ.ಎಸ್.ಪಿ) | 4030.31 |
| 4 | 4210-01-110-1-01-423 (ಟಿ.ಎಸ್.ಪಿ) | 1612.12 |
| 5 | 2210-01-110-1-21-200 (ಕಟ್ಟಡ ನಿರ್ವಹಣೆ) | 4688.20 |
| 6 | 2210-01-110-1-21-422 (ಎಸ್.ಸಿ.ಎಸ್.ಪಿ) | 937.50 |
| 7 | 2210-01-110-1-21-423 (ಟಿ.ಎಸ್.ಪಿ) | 374.30 |
| 8 | 2210-01-110-4-06-422 (ಎಸ್.ಸಿ.ಎಸ್.ಪಿ. ಮಹಾತ್ವಾಕಾಂಕ್ಷಿ ತಾಲ್ಲೂಕು) | 1050.00 |
| 9 | 2210-01-110-4-06-423 (ಟಿ.ಎಸ್.ಪಿ ಮಹಾತ್ವಾಕಾಂಕ್ಷಿ ತಾಲ್ಲೂಕು) | 450.00 |

<table>
<tr>
<td></td>
<td></td>
<td>
<table>
<tr><td>10</td><td>2210-01-110-4-06-059&200 (ಮಹಾತ್ವಾಕಾಂಕ್ಷಿ ತಾಲ್ಲೂಕು)</td><td>3500.00</td></tr>
<tr><td>11</td><td>4210-80-800-0-01-423(unspent)</td><td>84.35</td></tr>
<tr><td></td><td>ಒಟ್ಟು</td><td>67084.35</td></tr>
</table>
ಮೇಲಿನ ಅನುದಾನವನ್ನು ಆದ್ಯತೆ ಮೇರೆಗೆ ಅವಶ್ಯವಿರುವ ಆಸ್ಪತ್ರೆಗಳಲ್ಲಿ ಮೂಲಸೌಕರ್ಯಗಳಾದ ಕಟ್ಟಡ, ವಸತಿ, ನೀರು ಹಾಗೂ ಶೌಚಾಲಯ ಮತ್ತಿತರ ಅಭಿವೃದ್ಧಿ ಮತ್ತು ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮವಹಿಸಲಾಗಿದೆ.
</td>
</tr>
<tr>
<td>ಇ)</td>
<td>ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಅಗತ್ಯ ಸಂಖ್ಯೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆಯೇ?</td>
<td rowspan="2">ರಾಜ್ಯದ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಮಂಜೂರಾದ ಮತ್ತು ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳ ವಿವರ ಈ ಕೆಳಕಂಡಂತಿದೆ.
<table>
<tr><td></td><td>S</td><td>W</td><td>V</td></tr>
<tr><td>Specialist</td><td>2877</td><td>2155</td><td>722</td></tr>
<tr><td>GDMO</td><td>2355</td><td>1748</td><td>607</td></tr>
<tr><td>SMO</td><td>246</td><td>127</td><td>119</td></tr>
<tr><td>CMO</td><td>706</td><td>260</td><td>446</td></tr>
<tr><td>Dental</td><td>425</td><td>404</td><td>21</td></tr>
</table>
ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗುತ್ತಿದೆ.
<ol>
<li>ಸರ್ಕಾರದ ಪತ್ರ ದಿನಾಂಕ:13.12.2022 ಮತ್ತು ಆದೇಶ ಸಂಖ್ಯೆ: ಆಕುಕ 619 ಹೆಚ್‌ಎಸ್‌ಹೆಚ್ 2022, ದಿನಾಂಕ: 17.01.2024 ರಲ್ಲಿ ಆಕುಕ ಇಲಾಖೆಯಲ್ಲಿ ಖಾಲಿ ಇರುವ ತಜ್ಞ ವೈದ್ಯರನ್ನು ಮತ್ತು ಸಾ.ಕ ವೈದ್ಯಾಧಿಕಾರಿಗಳನ್ನು ಕೆಲವು ಷರತ್ತುಗಳಿಗೊಳಪಟ್ಟು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅನುಮತಿ ನೀಡಲಾಗಿದೆ.</li>
<li>ಇಲಾಖೆಯ ಮುಖಾಂತರ ಸೇವಾ ನಿರತ ಸ್ನಾತಕೋತ್ತರ ವ್ಯಾಸಂಗ ಪೂರೈಸಿ ಬರುವ ತಜ್ಞ ವೈದ್ಯರನ್ನು ತಜ್ಞತೆ ಹುದ್ದೆಗೆ ನೇಮಿಸಲಾಗುತ್ತಿದೆ.</li>
<li>ಸ್ನಾತಕೋತ್ತರ ವ್ಯಾಸಂಗವನ್ನು ಪೂರೈಸಿ 1 ವರ್ಷದ ಕಡ್ಡಾಯ ಸೇವೆಗಾಗಿ ಬರುವ ವೈದ್ಯ ಅಭ್ಯರ್ಥಿ/ತಜ್ಞ ವೈದ್ಯ ಅಭ್ಯರ್ಥಿಗಳನ್ನು ನೇಮಕ ಮಾಡುವ ಮೂಲಕ ವೈದ್ಯರ/ತಜ್ಞರುಗಳ ಕೊರತೆಯನ್ನು ನೀಗಿಸಲು ಕ್ರಮಕೈಗೊಳ್ಳಲಾಗುತ್ತಿದೆ.</li>
</ol>
</td>
</tr>
<tr>
<td>ಈ)</td>
<td>ಇಲ್ಲದೇ ಇದ್ದಲ್ಲಿ, ಈ ವೈದ್ಯರುಗಳನ್ನು ನೇಮಕಾತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: ಯಾವಾಗ ನೇಮಕಾತಿ ಮಾಡಲಾಗುವುದು?</td>
</tr>
</table>

ಸಂಖ್ಯೆ: ಆಕುಕ 143 ಎಸ್‌ಬಿವಿ 2024

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು